ಸಂಶಯ ಮೂಡಿತು. ಈ ಇಬ್ಬಂದಿತನದ ಒಗಟಿನ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ, ಎಳೆ ಎಳೆಯಾಗಿ ಅರ್ಥಮಾಡಿಕೊಳ್ಳುವ ಪರಿಕ್ರಮದ ಒಂದು ಘಟ್ಟದಲ್ಲಿ ತಾನು ಈ ಮೊದಲೇ ಕಂಡ ಹರಿವಾಣದಾಕಾರದ ಚಿಟ್ಟೆಯೇ ಇರಬೇಕೆಂಬ ತೀರ್ಮಾನ ಮುಟ್ಟಿದಾಗ, ತನ್ನ ಆಯಸ್ಸು ಕೇವಲ ಐದು ದಿನಗಳು ಮಾತ್ರ ಎಂದು ಹೊಳೆದು, ಪರಿತಪಿಸತೊಡಗಿದ. ದಾರ್ಶನಿಕ ಸಂಸ್ಕಾರದ ಪರಿಣಾಮವಿರಬೇಕು. ತಾನು ಹುಟ್ಟಿ ಈಗಾಗಲೇ ಒಂದು ದಿನವಾಗಿರಬಹುದು. ಅಂದರೆ ಉಳಿದದ್ದು ಕೇವಲ ನಾಲ್ಕುದಿನ. ಹುಟ್ಟಿ ಎರಡು ದಿನವಾಗಿದ್ದರೆ, ಕೇವಲ ಮೂರು ದಿನಗಳ ಬದುಕು. ನಾಲ್ಕು ದಿನಗಳಾಗಿದ್ದರೆ, ನಾಳೆಯೇ ಸಾವು. ಐದೂ ದಿನಗಳಾಗಿಬಿಟ್ಟಿದ್ದರೆ ಇಗೋ, ಈಗಲೇ ಸತ್ತೆ! ಚಿಟ್ಟೆಯ ಮೈ ಬೆವರಿತು. ಮತ್ತಷ್ಟು ದಿನ ಬದುಕಲು ತಾನು ಏನಾಗಬೇಕು! ಆಹಾ! ಅಗೋ. ಅಲ್ಲಿ ಓಡುತ್ತಿರುವ ನಾಯಿಯಂಥ ಒಂದು ನಾಯಿಯಾದರೂ ಆಗಿದ್ದರೆ! ಹತ್ತರಿಂದ ಹನ್ನೆರಡು ವರ್ಷಗಳ ದೀರ್ಘಾವಧಿಯ ಬದುಕನ್ನಾದರೂ ಅನುಭವಿಸಬಹುದಿತ್ತಲ್ಲ? ಎಂಬ ಯೋಚನೆ ಹೊಳೆಯಿತು. ಕೂಡಲೇ ರೆಕ್ಕೆ ಉದುರಿ, ಮೈ ದೊಡ್ಡದಾಗಿ, ಬಾಯಿಯ ಸೊಂಡಿಲು ಮಾಯವಾಗಿ, ಅದು ಭೌಭೌ ಎನ್ನತೊಡಗಿತು. ಡೊಂಕು ಬಾಲವೂ ಮೂಡಿತ್ತು. ಆಹಾ! ನಾನು ಅಷ್ಟೊಂದು ತೀವ್ರವಾಗಿ ಬಯಸಿದ್ದೇ ನಾನು ಹೀಗೆ ರೂಪಾಂತರ ಹೊಂದಲು, ಸಹಾಯಕವಾಯಿತು. ನಿಜವಾದ, ತೀಕ್ಷ್ಣವಾದ, ತೀವ್ರವಾದ ಅಖಂಡ ಬಯಕೆಯೇ ತಪಸ್ಸು! ಹಾಗಾದರೆ, ಕೇವಲ 10–12 ವರ್ಷಗಳ ನಾಯಿ ಜೀವನವನ್ನೇಕೆ ಬದುಕಲಿ? ಕುದುರೆಯಂತೆ ಎರಡು ದಶಕಗಳ ಬದುಕು ನನ್ನದಾಗಬಾರದೇ ಎಂಬ –ಅಷ್ಟೇ ತೀಕ್ಷ್ಣವಾಗಿ, ತೀವ್ರವಾಗಿ ಬಯಕೆ ಮೂಡಿತು. ಮತ್ತೊಂದು ಕ್ಷಣದಲ್ಲಿ ಮಿರಮಿರ ಮೈಮಿಂಚುವ, ಒಂದು ಕುದುರೆ ನಾಯಿಯ ಜಾಗದಲ್ಲಿ ಆವಿಷ್ಕಾರಗೊಂಡಿತು. 'ಆಹಾ! ನಾನು ನಾಯಿಯಲ್ಲ, ನಿಜವಾಗಿಯೂ ನಾನೊಂದು ಕುದುರೆ! ಇನ್ನೂ ಪರವಾಗಿಲ್ಲ, ಎಷ್ಟೊಂದು ವರ್ಷ ಬದುಕಿ ಜೀವನದ ಸವಿಯನ್ನು ಉಣ್ಣಬಹುದು' – ಎಂದು ಲವಲವಿಕೆಯಿಂದ– ಪುಷ್ಪೋದ್ಯಾನದಲ್ಲಿ ಹೇಷಾರವದೊಂದಿಗೆ ಕುಣಿದು ಕುಪ್ಪಳಿಸಿತು.

ಅವಸ್ಥಾಂತರಗೊಂಡು ಬೇಕುಬೇಕಾದ ಪ್ರಾಣಿಯಾಗಿಬಿಡುವುದು ಒಂದು ಮಜಾ ಕೊಡುವ ಲೀಲೆಯೇ ಆಯಿತು. ಮನಸ್ಸೀ ಬಯಕೆಯಿಂದ ಕಂಡ ಕಂಡ ಪ್ರಾಣಿಗಳೆಲ್ಲಾ ಆಗಬೇಕೆಂದು ಬಯಕೆ ಮೂಡಿತು. ಒಂದು ಕ್ಷಣ ಹಕ್ಕಿ ಮತ್ತೊಂದು ಕ್ಷಣ ಬೆಕ್ಕು, ಮಗದೊಂದು ಕ್ಷಣ ಹಾವು. ಒಂದೇ, ಎರಡೇ? ಇಪ್ಪತ್ತು ವರ್ಷ ಬದುಕುವ ಹುಲಿಯಾದಾಗ ನಲವತ್ತು ವರ್ಷ ಬದುಕುವ ಸಿಂಹವಾಗುವ ಬಯಕೆಯಾಗಿ ಸಿಂಹವಾಯಿತು. ಅನಂತರ ನಲವತ್ತೈದು ವರ್ಷ ಆಯಸ್ಸಿನ ಘೇಂಡಾಮೃಗವಾಯಿತು. ಅದೂ ಬೇಡವಾಗಿ ಅರವತ್ತು ವರ್ಷ ಬದುಕಲು ತೀರ್ಮಾನಿಸಿ ಒಂದು ಮೊಸಳೆಯಾಗಿ ನದಿಯೊಳಕ್ಕೆ ಇಳಿಯಿತು. ನೀರಿನಿಂದ ಆಗಾಗ ನೆಲಕ್ಕೆ ಬಂದು ಸುತ್ತ ದೃಷ್ಟಿ ಬೀರಿ ತನಗಿಂತ ಹೆಚ್ಚಿನ ಆಯಸ್ಸಿನವರು ಯಾರಿದ್ದಾರೆ ಎಂದು ತಪಾಸಣೆ ಮಾಡಿ, ಒಮ್ಮೆ ನೀರು ಕುಡಿಯಲು ಬಂದ ಆನೆಯೊಂದರ ರೂಪ ಅದಕ್ಕೆ ಬಹಳ ಮನಸ್ಸಿಗೆ ಬಂದು ತಾನೊಂದು ಆನೆಯಾದರೆ ಎಷ್ಟು ಚಂದ ಎಂದು ಬಯಸಿದ ತಕ್ಷಣ ಎಪ್ಪತ್ತು ವರ್ಷ ಆಯುಃ ಪ್ರಮಾಣದ ಆನೆಯಾಗಿ ಘೀಂಕರಿಸಿತು. ಕಾಡಿನಲ್ಲಿ ಸ್ವೇಚ್ಛೆಯಾಗಿ ಸೊಂಡಿಲನ್ನು ಎಡಕ್ಕೂ ಬಲಕ್ಕೂ ವಿಲಾಸಮಯವಾಗಿ ಅಲ್ಲಾಡಿಸುತ್ತಾ ಓಡಾಡಿತು. ಬಿದಿರಿನ ಚಿಗುರನ್ನು ಅರಸುತ್ತಾ ಕಾಡಿನ ಅಂಚಿಗೆ ಸವಾರಿ ಬಂದಾಗ ಪುರಳೆ ಆರಿಸುತ್ತಿದ್ದ ಮುದುಕನೊಬ್ಬ ಕಣ್ಣಿಗೆ ಬಿದ್ದ. ಅರೆ! ನಾನೊಬ್ಬ ಮನುಷ್ಯನಾದರೆ! ನೂರು ವರ್ಷ ಬಾಳಬಹುದಲ್ಲವೇ? ನಾನೇಕೆ ಮನುಷ್ಯನಾಗಬಾರದು?